# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 920 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ |
| ಉತ್ತರಿಸುವ ದಿನಾಂಕ | : | 14-07-2023 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಇಲಾಖೆ ಸಚಿವರು. |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಎಷ್ಟು ಪ್ರಿ-ಮೆಟ್ರಿಕ್ ಹಾಗೂ ಪೋಸ್ಟ್ ಮೆಟ್ರಿಕ್ ವಸತಿ ನಿಲಯಗಳ ಕಾರ್ಯನಿರ್ವಹಿಸುತ್ತಿವೆ; (ಜಿಲ್ಲಾವಾರು ವಿವರ ನೀಡುವುದು)</td><td>ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಈ ಕೆಳಕಂಡಂತೆ ಸರ್ಕಾರಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ.<br>
<table>
<tr><th>ಕ್ರ.ಸಂ</th><th>ನಿಲಯಗಳ ವಿವರ</th><th>ಸಂಖ್ಯೆ</th></tr>
<tr><td>01</td><td>ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು</td><td>1231</td></tr>
<tr><td>02</td><td>ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು</td><td>671</td></tr>
</table>
ಸದರಿ ವಿದ್ಯಾರ್ಥಿನಿಲಯಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ.</td><td>ಸದರಿ ವಸತಿ ನಿಲಯಗಳಿಗೆ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು;</td><td>ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಮಂಜೂರಾಗಿರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.<br>
<table>
<tr><th>ಕ್ರಸಂ</th><th>ವೃಂದ</th><th>ಪದನಾಮ</th><th>ಮಂಜೂರಾತಿ</th><th>ಭರ್ತಿ</th><th>ಖಾಲಿ</th></tr>
<tr><td>01</td><td>ಸಿ</td><td>ಸೀನಿಯರ್ ವಾರ್ಡನ್</td><td>61</td><td>43</td><td>18</td></tr>
<tr><td>02</td><td>ಸಿ</td><td>ವಾರ್ಡನ್</td><td>1829</td><td>1092</td><td>737</td></tr>
<tr><td>03</td><td>ಸಿ</td><td>ಜೂನಿಯರ್ ವಾರ್ಡನ್</td><td>518</td><td>465</td><td>53</td></tr>
<tr><td>04</td><td>ಡಿ</td><td>ಅಡುಗೆಯವರು</td><td>4015</td><td>1920</td><td>2095</td></tr>
<tr><td>05</td><td>ಡಿ</td><td>ಅಡುಗೆ ಸಹಾಯಕರು</td><td>2813</td><td>1273</td><td>1540</td></tr>
<tr><td>06</td><td>ಡಿ</td><td>ಕಾವಲುಗಾರರು</td><td>1951</td><td>606</td><td>1345</td></tr>
</table></td></tr>
</table>

---2

| | | |
|---|---|---|
| ಇ. | ಬಡ ಮಕ್ಕಳ ಹಿತದೃಷ್ಟಿಯಿಂದ ಖಾಲಿಯಿರುವ ಹುದ್ದೆಗಳು ಯಾವಾಗ ಭರ್ತಿ ಮಾಡಲಾಗುವುದು? | ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ವಾರ್ಡನ್ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕವಾಗಿ ನಿಲಯದ ಸುಗಮ ನಿರ್ವಹಣೆಗೆ ಅಡಚಣೆಯಾಗದಂತೆ ಹತ್ತಿರದ ವಿದ್ಯಾರ್ಥಿ ನಿಲಯಗಳ ವಾರ್ಡನ್ ಹುದ್ದೆಯ ನೌಕರರನ್ನೇ ಹೆಚ್ಚುವರಿ ಪ್ರಭಾರದಲ್ಲಿರಿಸಲು ಕ್ರಮಕೈಗೊಳ್ಳಲಾಗಿದೆ. ಆದಾಗ್ಯೂ ಸಹ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.<br><br>ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಮೆಟ್ರಿಕ್ ಪೂರ್ವ / ನಂತರದ 1902 ಬಾಲಕರ ವಿದ್ಯಾರ್ಥಿನಿಲಯಗಳು ಮಂಜೂರಾಗಿರುತ್ತವೆ. ಸದರಿ ವಿದ್ಯಾರ್ಥಿ ನಿಲಯಗಳಲ್ಲಿ 691 ಪುರುಷ ವಾರ್ಡನ್ ಹಾಗೂ 26 ಸೀನಿಯರ್ ವಾರ್ಡನ್ ಪುರುಷ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮೆಟ್ರಿಕ್ ಪೂರ್ವ /ನಂತರದ 577 ಬಾಲಕಿಯರ ವಸತಿ ನಿಲಯಗಳು ಮಂಜೂರಾಗಿರುತ್ತವೆ. ಸದರಿ ವಿದ್ಯಾರ್ಥಿನಿಲಯಗಳಲ್ಲಿ 401 ವಾರ್ಡನ್ ಮಹಿಳಾ ಹುದ್ದೆಗಳು ಭರ್ತಿಯಾಗಿವೆ ಹಾಗೂ 17 ವಿದ್ಯಾರ್ಥಿನಿಲಯಗಳಲ್ಲಿ ಸೀನಿಯರ್ ವಾರ್ಡನ್ ಹುದ್ದೆಯಲ್ಲಿ ಮಹಿಳಾ ವಾರ್ಡನ್ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮುಂದುವರೆದು ಕೆ.ಪಿ.ಎಸ್.ಸಿ ವತಿಯಿಂದ ಉಳಿಕೆ ಮೂಲ ವೃಂದದ 80 ಅಭ್ಯರ್ಥಿಗಳು ಹಾಗೂ ಹೈ-ಕ ಸ್ಥಳೀಯ ವೃಂದದ 60 ಹುದ್ದೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ:ಪಿಎಸ್ಸಿ 14 ಆರ್ಟಿ (4) ಬಿ (1) 2020/39 ದಿ:05-05-2023 ರಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅಂತಿಮ ಆಯ್ಕೆಪಟ್ಟಿ ಪ್ರಕಟಗೊಂಡ ನಂತರ ನೇಮಕಾತಿ ಆದೇಶ ಹೊರಡಿಸಲು ಕ್ರಮವಹಿಸಲಾಗುವುದು.<br><br>ಮುಂದುವರೆದು, ಪ್ರಸ್ತುತ ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿಯೂ ಸಹ ಖಾಲಿ ಇರುವ ವಾರ್ಡನ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಹಾಲಿ ಚಾಲ್ತಿಯಲ್ಲಿರುವ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಸತಿ ಶಾಲಾ ಶಿಕ್ಷಕರು (ಪುರುಷ) ವೃಂದದಿಂದ ಲಭ್ಯತೆ ಅನುಸಾರ 64 ಅರ್ಹ ನೌಕರರಿಗೆ ಹಾಗೂ ವಸತಿ ಶಾಲಾ ಶಿಕ್ಷಕರು (ಮಹಿಳೆ) ಹಾಗೂ ಜೂನಿಯರ್‌ವಾರ್ಡನ್ (ಮಹಿಳೆ) ವೃಂದದಿಂದ ಲಭ್ಯತೆ ಅನುಸಾರ 45 ಅರ್ಹನೌಕರರಿಗೆ ದಿ:16-06-2023 ರಲ್ಲಿ ವಾರ್ಡನ್ (ಮಹಿಳೆ) ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿ ವಿದ್ಯಾರ್ಥಿನಿಲಯಗಳ ಸಮರ್ಪಕ ನಿರ್ವಹಣೆಗೆ ಯಾವುದೇ ಅಡಚಣೆಯಾಗದಂತೆ ಕ್ರಮವಹಿಸಲಾಗಿದೆ.<br><br>ಗ್ರೂಪ್-ಡಿ ಹುದ್ದೆಗಳಿಗೆ ಸಂಬಂಧಿಸಿದಂತೆ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಹೊರಸಂಪನ್ಮೂಲ ಮುಖೇನ ಸಿಬ್ಬಂದಿಗಳ ಸೇವೆಯನ್ನು ಪಡೆದು ವಿದ್ಯಾರ್ಥಿನಿಲಯಗಳ ಸುಗಮ ನಿರ್ವಹಣೆಗೆ ಕ್ರಮವಹಿಸಲಾಗಿದೆ. |

ಸಕಇ 242 ಎಸ್‌ಎಲ್‌ಪಿ 2023

(ಡಾ: ಹೆಚ್.ಸಿ.ಮಹದೇವಪ್ಪ)
**ಸಮಾಜ ಕಲ್ಯಾಣ ಇಲಾಖೆ ಸಚಿವರು**

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 920 ಗೆ

## ಅನುಬಂಧ-1

| ಕ್ರ.ಸಂ | ಜಿಲ್ಲೆಯ ಹೆಸರು | ವಿದ್ಯಾರ್ಥಿನಿಲಯಗಳ ಸಂಖ್ಯೆ | | | | | |
|---|---|---|---|---|---|---|---|
| | | ಮೆಟ್ರಿಕ್ ಪೂರ್ವ | | | ಮೆಟ್ರಿಕ್ ನಂತರ | | |
| | | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು |
| 1 | ಬಾಗಲಕೋಟೆ | 33 | 10 | 43 | 14 | 9 | 23 |
| 2 | ಬೆಳಗಾವಿ | 51 | 15 | 66 | 19 | 10 | 29 |
| 3 | ಬೆಂಗಳೂರು (ಗ್ರಾ) | 18 | 5 | 23 | 5 | 5 | 10 |
| 4 | ಬೆಂಗಳೂರು ನಗರ | 20 | 8 | 28 | 17 | 12 | 29 |
| 5 | ವಿಜಯಪುರ | 46 | 10 | 56 | 11 | 8 | 19 |
| 6 | ಬಳ್ಳಾರಿ | 16 | 4 | 20 | 13 | 6 | 19 |
| 7 | ಬೀದರ್ | 34 | 8 | 42 | 12 | 7 | 19 |
| 8 | ಶಿವಮೊಗ್ಗ | 35 | 14 | 49 | 14 | 14 | 28 |
| 9 | ಮಂಡ್ಯ | 33 | 13 | 46 | 11 | 11 | 22 |
| 10 | ಮಡಿಕೇರಿ | 10 | 7 | 17 | 2 | 2 | 4 |
| 11 | ಮೈಸೂರು | 36 | 11 | 47 | 17 | 18 | 35 |
| 12 | ಚಿಕ್ಕಬಳ್ಳಾಪುರ | 39 | 10 | 49 | 15 | 8 | 23 |
| 13 | ಚಿಕ್ಕಮಗಳೂರು | 26 | 12 | 38 | 13 | 8 | 21 |
| 14 | ಚಿತ್ರದುರ್ಗ | 37 | 15 | 52 | 22 | 17 | 39 |
| 15 | ರಾಮನಗರ | 28 | 9 | 37 | 7 | 6 | 13 |
| 16 | ರಾಯಚೂರು | 35 | 11 | 46 | 17 | 13 | 30 |
| 17 | ಉಡುಪಿ | 9 | 6 | 15 | 3 | 5 | 8 |
| 18 | ಉತ್ತರ ಕನ್ನಡ | 17 | 9 | 26 | 4 | 3 | 7 |
| 19 | ಹಾಸನ | 41 | 17 | 58 | 16 | 16 | 32 |
| 20 | ಹಾವೇರಿ | 29 | 8 | 37 | 14 | 8 | 22 |
| 21 | ಕಲಬುರಗಿ | 62 | 10 | 72 | 21 | 13 | 34 |
| 22 | ಕೊಪ್ಪಳ | 26 | 7 | 33 | 11 | 7 | 18 |
| 23 | ಕೋಲಾರ | 38 | 14 | 52 | 13 | 6 | 19 |
| 24 | ಗದಗ | 21 | 5 | 26 | 12 | 6 | 18 |
| 25 | ತುಮಕೂರು | 50 | 13 | 63 | 23 | 15 | 38 |
| 26 | ದಾವಣಗೆರೆ | 29 | 9 | 38 | 17 | 11 | 28 |
| 27 | ದಕ್ಷಿಣ ಕನ್ನಡ | 11 | 8 | 19 | 5 | 6 | 11 |
| 28 | ಧಾರವಾಡ | 9 | 5 | 14 | 12 | 6 | 18 |
| 29 | ಚಾಮರಾಜನಗರ | 29 | 11 | 40 | 7 | 9 | 16 |
| 30 | ಯಾದಗಿರಿ | 32 | 6 | 38 | 11 | 4 | 15 |
| | ಒಟ್ಟು:- | 930 | 301 | 1231 | 394 | 277 | 671 |